**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು**

# ಓ ಎಸ್ 59 / 2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಶ್ರೀನಿವಾಸ .ಹೆಚ್ ಎನ್ | ಪ್ರಮಾಣ ಮಾಡಿದ ದಿನಾಂಕ | **21.07.2022** |
| ತಂದೆಯ ಹೆಸರು | ನಂಜೇಗೌಡ | | |
| ವಯಸ್ಸು | 40 ವರ್ಷ | | |
| ವೃತ್ತಿ | ಸರ್ವೆಯರ್ | | |
| ವಾಸಸ್ಥಳ | ದೊಡ್ಡಬಳ್ಳಾಪುರ | ಸಿಡಬ್ಲೂ-1 | |

ಮುಖ್ಯ ವಿಚಾರಣೆ : ನ್ಯಾಯಾಲಯದಿಂದ ಃ

ನ್ಯಾಯಾಲಯದ ನಿಯೋಗಿಯಾಗಿ ನನ್ನ ನಿಯೋಗಿಯ ಕೆಲಸ ಮಾಡಿ ನ್ಯಾಯಾಲಯಕ್ಕೆ ಬರೆದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಸಿ-1 ಎಂದು, ವಾದಿ ಮತ್ತು ಪ್ರತಿವಾದಿಗಳಿಗೆ ಕಳುಹಿಸಿದ ನೋಟಿಸನ್ನು ನಿಸಿ-2 ಎಂದು, ಪ್ರತಿವಾದಿಗಳ ಪರ ಮೇಮೋ ಅಫ್ ಇನ್ಸಟ್ರಕ್ಷನ್ ಗೆ ನೀಡಿದ ಉತ್ತರವನ್ನು ನಿಸಿ-3 ಎಂದು, ಮಹಜರನ್ನು ನಿಸಿ-4 ಎಂದು, ವಾದಿ ಪರ ಮೇಮೋ ಅಫ್ ಇನ್ಸಟ್ರಕ್ಷನ್ ಗೆ ನೀಡಿದ ಉತ್ತರವನ್ನು ನಿಸಿ-5 ಎಂದು, ನಕ್ಷೆಯನ್ನು ನಿಸಿ-6 ಎಂದು, ಕಮಿಷನರ್ ವರ್ಕ ಮಾಡುವ ಸಲುವಾಗಿ ಪೋಲಿಸ್ ರಕ್ಷಣೆ ಕೋರಿ ಸಲ್ಲಿಸಿದ ಅರ್ಜಿಯನ್ನು ನಿಸಿ-7 ಎಂದು ಗುರುತಿಸಲಾಯಿತು.

ಪಾಟೀ ಸವಾಲು :- ಪ್ರತಿವಾದಿಗಳ ಪರ ಶ್ರೀ ಎಂ ಎಸ್ ಹೆಚ್ ವಕೀಲರಿಂದ ಃ

ರಸ್ತೆಯ ಅಳತೆಯನ್ನು ನೀವು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ನಿಸಿ-6 ರಲ್ಲಿ ತೋರಿಸಿದ್ದು ಅದೇ ರೀತಿ ಮೇಮೋ ಅಫ್ ಇನ್ಸಟ್ರಕ್ಷನ್ ಗೆ ನೀಡಿದ ಉತ್ತರದಲ್ಲಿ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ರಸ್ತೆಯ ಅಗಲದ ಬಗ್ಗೆ ನಿಮಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನೀವು ನಕ್ಷೆಯಲ್ಲಿ ತೋರಿಸಿರುವ ಕೊಳವೆಬಾವಿಯನ್ನು ಗ್ರಾಮಸ್ಥರು ನೀರಿಗಾಗಿ ಉಪಯೋಗಿಸುತ್ತಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ನೀರಿನ ಪೈಪುಗಳನ್ನು ತೆಗೆದಿದ್ದರು ಎಂದು ನುಡಿಯುತ್ತಾರೆ. ಸದರಿ ಪೈಪುಗಳನ್ನು ಯಾರು ತೆಗೆದಿರುತ್ತಾರೆ ಎಂದು ನಾನು ವಿಚಾರಣೆ

ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಕೊಳವೆ ಬಾವಿ ಚಾಲ್ತಿಯಲ್ಲಿ ಇರಲಿಲ್ಲ. ಸರ್ವೆ ನಂ 7ಃ3 ರಲ್ಲಿ ರಸ್ತೆ ಹೋಗಿರುತ್ತದೆ.

ಪಾಟೀ ಸವಾಲು :- ವಾದಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ ಃ

ನಿಸಿ-6 ರಲ್ಲಿ ಕೊಳವೆಬಾವಿ ವಾದಿಯ ಜಮೀನಿನಲ್ಲಿ ಬರುತ್ತದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲಾ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು